## ರಾತ್ರಿ ನಿದ್ದೆ ಮಾಡಲ್ಲ

ಪಾಂಡು ತನ್ನ ಮಾಲೀಕನಿಗೆ ಹೇಳಿದ: 'ಸಾರ್, ನೈಟ್ ವಾಚ್‌ಮನ್ ಬೇಕು ಅಂದಿದ್ರಲ್ಲ, ಕರೆದುಕೊಂಡು ಬಂದಿದ್ದೀನಿ ನೋಡಿ.'
ಮಾಲೀಕ ಕೇಳಿದ: 'ಮಲಗಿ ನಿದ್ರೆ ಮಾಡದೆ ರಾತ್ರಿ ಡ್ಯೂಟಿ ಮಾಡ್ತಾನೆ ಅಂತ ಏನು ಗ್ಯಾರಂಟಿ?'
ಪಾಂಡು ಉತ್ತರಿಸಿದ: 'ಎಲ್ಲಾ ಚೆಕ್ ಮಾಡಿದ್ದೀನಿ ಸರ್, ಮೂರು ವರ್ಷದ ವಾಟ್ಸ್‌ಆ್ಯಪ್, ಫೇಸ್‌ಬುಕ್ ರೆಕಾರ್ಡ್ ಕೂಡ ತೆಗೆಸಿದ್ದೀನಿ. ಎಲ್ಲವೂ ರಾತ್ರಿ 10ರಿಂದ ಬೆಳಿಗ್ಗೆ 6ರೊಳಗೆ ಮಾಡಿದ್ದಾನೆ. ಹೀಗಾಗಿ ಅವನು ರಾತ್ರಿ ನಿದ್ರೆ ಮಾಡಲ್ಲ ಅಂತ ತಿಳ್ಕೊಬಹುದು.'

**ಶೋಭಾ ಪ್ರಮೋದ್**





ಚಿತ್ರಗಳು: ಗಣೇಶ ಆಚಾರ್ಯ

## ಹತ್ತು ಸೈಕಲ್

ರಾಜು ಕಿಲಾಡಿ ಹುಡುಗ. ಏನು ಮಾಡಿದರೂ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಅಭ್ಯಾಸ ಮಾಡುತ್ತಿರಲಿಲ್ಲ. ಒಂದು ದಿನ ತಂದೆ ಮಗನನ್ನು ಕರೆದು ಹೇಳಿದರು, 'ನೋಡು ಚೆನ್ನಾಗಿ ಓದಿ, ಪರೀಕ್ಷೆಯಲ್ಲಿ ಒಳ್ಳೆ ಅಂಕ ತೆಗೆದರೆ ನಿನಗೊಂದು ಸೈಕಲ್ ಕೊಡಿಸುತ್ತೇನೆ' ಅಂತ. ಅದಕ್ಕೆ ರಾಜು ಕೇಳಿದ, 'ಫೇಲಾದ್ರೆ?' 'ಏನಿಲ್ಲ, ಹತ್ತು ಸೈಕಲ್ ಕೊಡಿಸ್ತೇನೆ.' ರಾಜು ಖುಷಿಯಿಂದ, 'ಹತ್ತು ಸೈಕಲ್ ಕೊಡಿಸ್ತಿಯಾ?' ಎಂದ. ತಂದೆ ವಿವರಿಸಿದರು: 'ಪಾಸಾದ್ರೆ ನಿನಗೆ ಓಡಾಡೊಕೆ ಒಂದು ಸೈಕಲ್, ಫೇಲಾದ್ರೆ ಅಂಗಡಿ ಇಡೋಕೆ ಹತ್ತು ಸೈಕಲ್!'

**ನರಸಿಂಹ ಪೈ**